■ ಹನಿ

## 'ಯುವ'ರಾಜ!




ಕ್ರಿಕೆಟ್‌ನಲ್ಲಿ 33 ವರ್ಷ ವಯಸ್ಸು ಎಂದರೆ ಇಳಿವಯಸ್ಸು ಶುರುವಾಯಿತೆಂದೇ ಅರ್ಥ. ಆದರೆ 33ರ ಹರೆಯದ ಯುವರಾಜ್ ಸಿಂಗ್, ಐಪಿಎಲ್ ನಲ್ಲಿ ತಾನಿನ್ನೂ ಹದಿಹರೆಯದವನೇ ಎಂದು ಸಾಬೀತು ಪಡಿಸಿದ್ದಾನೆ. ಇತರ ಎಲ್ಲ ಆಟಗಾರರನ್ನೂ ಏಲಂನಲ್ಲಿ ಹಿಂದಿಕ್ಕಿರುವ ಯುವರಾಜ್, ಬರೋಬ್ಬರಿ 14 ಕೋಟಿ ರೂಪಾಯಿಗಳಿಗೆ ಬೆಂಗಳೂರಿನ ರಾಯಲ್ ಚಾಲೆಂಜರ್ಸ್‌ಗೆ ಏಲಂ ಆಗಿದ್ದಾನೆ. ಈವರೆಗಿನ ಐಪಿಎಲ್ ಪಂದ್ಯಗಳಲ್ಲೇ ಇದು ಆಟಗಾರನೊಬ್ಬ ಏಲಂ ಆದ ಅತ್ಯಧಿಕ ಮೊತ್ತ. ಈ ಹಿಂದೆ 2011ರಲ್ಲಿ ಗೌತಮ್ ಗಂಭೀರ್ 11.04 ಕೋಟಿ ರೂಪಾಯಿಗೆ ಏಲಂ ಆಗಿದ್ದೇ ದಾಖಲೆಯಾಗಿತ್ತು. ಈ ಸಲ ಯುವರಾಜ್ ಮಾತ್ರವಲ್ಲ, ದಿನೇಶ್ ಕಾರ್ತಿಕ್ ಕೂಡಾ (12.5 ಕೋಟಿ) ಆ ದಾಖಲೆಯನ್ನು ಮುರಿದಿದ್ದಾನೆ.

ಯುವರಾಜ್ ನಿಜಕ್ಕೂ ಅಷ್ಟೊಂದು ಬೆಲೆ ಬಾಳುವ ಆಟಗಾರನೇ ಅಥವಾ ಬೆಂಗಳೂರು ತಂಡ ಮಾಲೀಕ ವಿಜಯ ಮಲ್ಯ ತನ್ನ ಪ್ರತಿಷ್ಠೆಗಾಗಿ ಈ ಪಾಟಿ ದರ ಏರಿಸಿದ್ದಾರೆಯೆ.. ಎನ್ನುವ ಚರ್ಚೆ ನಡೆದಿದೆ. 'ಏಲಂ 10 ಕೋಟಿಗೇ ನಿಂತಿತ್ತು, ಆದರೆ ಅಧಿಕಾರಿಯೊಬ್ಬರ ತಪ್ಪಿನಿಂದ 14 ಕೋಟಿಗೆ ಏರಿತು' ಎಂದು ಮಲ್ಯ ಸಣ್ಣ ಧ್ವನಿಯಲ್ಲಿ ಹೇಳಿದ್ದೂ ವರದಿ ಆಯಿತು. ಇನ್ನೊಂದೆಡೆ ಬೆಂಗಳೂರು ತಂಡದ ನಾಯಕ ವಿರಾಟ್ ಕೊಹ್ಲಿ, ಯುವರಾಜ್ ಖರೀದಿಗೆ ಪಟ್ಟು ಹಿಡಿದದ್ದು ಎಂಬ ಸುದ್ದಿಯೂ ಇದೆ. ಅದೇನೇ ಇದ್ದರೂ ಯುವರಾಜ್ ಸುದ್ದಿಯ ಶಿಖರದಲ್ಲಿ ಇರುವುದಂತೂ ನಿಜ. ಕಳೆದ ಐಪಿಎಲ್ ಸೀಸನ್‌ನಲ್ಲಿ ಪುಣೆ ವಾರಿಯರ್ಸ್ ತಂಡದಲ್ಲಿದ್ದರೂ ಅನಾರೋಗ್ಯದಿಂದ ಆಟವಾಡಲು ಆಗಲಿಲ್ಲ. ಅಷ್ಟಾಗಿಯೂ ಈ ಸಲ ಅತ್ಯಧಿಕ ಬಿಡ್ ಬಂದಿದೆಯೆಂದರೆ ಯುವರಾಜ್ ಲಕ್ಕಿಯೂ ಹೌದು. ಕ್ಯಾನ್ಸರ್ ಜತೆಗೆ ಗುದ್ದಾಡಿ ಗುಣಮುಖನಾಗಿ, ಸಾಮಾಜಿಕ ಕಾಳಜಿಯ ಸೇವೆಗಳಲ್ಲೂ ತೊಡಗಿರುವ ಯುವರಾಜ್, ಇತ್ತೀಚೆಗೆ ಬಾಲಿವುಡ್ ನಟಿ ನೇಹಾ ದೂಪಿಯಾ ಜತೆ ನಿಕಟ ಸ್ನೇಹ ಬೆಳೆಸಿರುವುದು ಇನ್ನೊಂದು ಸುದ್ದಿ. ಸದ್ಯಕ್ಕೆ ಅತ್ಯಂತ ಅರ್ಹ ಬ್ಯಾಚುಲರ್ ಆಗಿರುವ ಯುವರಾಜ್, ಈ ವರ್ಷವೇ ಮದುವೆ ಕೂಡಾ ಆಗಬಹುದು ಎನ್ನುವುದು ನಿಕಟವರ್ತಿಗಳ ಅನ್ನಿಸಿಕೆ. ಮದುಮಗಳು ನೇಹಾಳೇ ಆಗಿರಬಹುದೆ ಎನ್ನುವುದನ್ನು ಖಚಿತವಾಗಿ ಹೇಳುವುದು ಕಷ್ಟ. ಏಕೆಂದರೆ ಈ ಹಿಂದೆ ಯುವರಾಜನ ಜತೆಗೆ ನಿಕಟವಾಗಿ ಸುತ್ತಾಡಿದ ಸುಂದರಿಯರ ಸಂಖ್ಯೆ ಕಡಿಮೆಯೇನೂ ಅಲ್ಲ.

## ದಾನಿ ಮತ್ತು ಜಾಣ

ಫೇಸ್‌ಬುಕ್ ಕಥೆ ಮುಗಿಯಿತು ಎಂಬ (ಅಪ)ಪ್ರಚಾರದ ಮಧ್ಯೆಯೇ ಅದರ ಸ್ಥಾಪಕ ಮಾರ್ಕ್ ಜೂಕರ್‌ಬರ್ಗ್ ಕಳೆದ ವರ್ಷದಲ್ಲಿ 'ಅಮೆರಿಕದ ಅತ್ಯಂತ ದೊಡ್ಡ ದಾನಿ' ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. 29ರ ಹರೆಯದ ಜೂಕರ್‌ಬರ್ಗ್ 2013ರಲ್ಲಿ ತನ್ನ ಪತ್ನಿ ಪ್ರಿಸಿಲ್ಲಾ ಚಾನ್ ಜತೆಗೂಡಿ ಒಟ್ಟು 990 ದಶಲಕ್ಷ ಡಾಲರ್ (ಅಂದಾಜು 61,231 ಕೋಟಿ ರೂಪಾಯಿ ) ಹಣವನ್ನು ಸಿಲಿಕಾನ್ ವ್ಯಾಲಿ ಕಮ್ಯೂನಿಟಿ ಫೌಂಡೇಶನ್ ಮೂಲಕ ದತ್ತಿ ನೀಡಿದ್ದಾನಂತೆ!



ಫೇಸ್‌ಬುಕ್, ಸ್ಥಾಪನೆ ಆದಂದಿನಿಂದಲೂ ಚಿನ್ನದ ಮೊಟ್ಟೆಯಿಡುವ ಕೋಳಿಯೇ. ಜೂಕರ್‌ಬರ್ಗ್ ಬಳಿಯಿರುವ ಫೇಸ್‌ಬುಕ್ ಕಂಪೆನಿಯ 18 ಲಕ್ಷ ಷೇರುಗಳ ಒಟ್ಟು ಮೌಲ್ಯ 3.4 ಶತಕೋಟಿ ದಾಟುತ್ತದೆ. ಈಗಾಗಲೆ ಈ ಮೌಲ್ಯದ ಮೂರನೇ ಒಂದರಷ್ಟನ್ನು ಜೂಕರ್‌ಬರ್ಗ್ ದಾನ ಮಾಡಿದಂತಾಗಿದೆ ಎನ್ನುವುದು ಹಣಕಾಸು ತಜ್ಞರ ಹೇಳಿಕೆ. ಅಮೆರಿಕದ ಶ್ರೀಮಂತರ ಮಧ್ಯೆ ದಾನ ನೀಡುವುದಕ್ಕೆ ದೊಡ್ಡ ಪೈಪೋಟಿಯೇ ನಡೆಯುತ್ತಿದೆ. ಕಳೆದ ವರ್ಷ 15 ಮಂದಿ ಅಮೆರಿಕನ್ ಶ್ರೀಮಂತರು ತಲಾ 100 ದಶಲಕ್ಷ ಡಾಲರ್ ಗಿಂತ ಹೆಚ್ಚು ದಾನ ಮಾಡಿದ್ದಾರಂತೆ. ಅದರ ಹಿಂದಿನ ವರ್ಷ ಈ ಪಟ್ಟಿಯಲ್ಲಿ 11 ಜನರ ಹೆಸರಿತ್ತು.

ಫೇಸ್‌ಬುಕ್‌ಗೆ ಬೇರೆ ಸಾಮಾಜಿಕ ತಾಣಗಳಿಂದ ಪ್ರಬಲ ಸ್ಪರ್ಧೆ ಎದುರಾಗಿದೆ ಎನ್ನುವ ಸುದ್ದಿಯೇನೋ ನಿಜ. ಆದರೆ ಈ ಸ್ಪರ್ಧೆಯಲ್ಲಿ ಫೇಸ್‌ಬುಕ್ ಸೋಲುವುದು ಅಷ್ಟು ಸುಲಭವಿಲ್ಲ. ಫೇಸ್‌ಬುಕ್‌ನ ತ್ರೈಮಾಸಿಕ ಆದಾಯ 2 ಶತಕೋಟಿ ಡಾಲರ್ ದಾಟಿದ್ದು, ಜಾಹೀರಾತು ವಲಯ ಗಟ್ಟಿಯಾಗಿದೆ. ಅದು ಮೊಬೈಲ್ ಜಾಹೀರಾತಿನ ಕ್ಷೇತ್ರದಲ್ಲೂ ದೊಡ್ಡ ಹೆಜ್ಜೆಯಿಟ್ಟಿದೆ. ಇತ್ತೀಚಿನ ಅಮೆರಿಕನ್ ಯುವಪೀಳಿಗೆ ಫೇಸ್‌ಬುಕ್ ಬಿಟ್ಟು ಇನ್ನೊಂದು ಸಾಮಾಜಿಕ ಜಾಲತಾಣವಾದ ಇನ್‌ಸ್ಟಾಗ್ರಾಮ್ ಮೊರೆ ಹೊಕ್ಕಿರುವುದು ನಿಜ. ಜತೆಗೆ ಜಗತ್ತಿನಾದ್ಯಂತ ವಾಟ್ಸ್‌ಆ್ಯಪ್ ಮತ್ತು ಸ್ನಾಪ್‌ಚಾಟ್ ಬಳಕೆ ಹೆಚ್ಚಾಗಿದೆ. ಆದರೆ ಜೂಕರ್‌ಬರ್ಗ್ ಎಷ್ಟು ಜಾಣ ವ್ಯಾಪಾರಿಯೆಂದರೆ, ಈ ಇನ್‌ಸ್ಟಾಗ್ರಾಮ್ ಕೂಡಾ ಜೂಕರ್‌ಬರ್ಗ್‌ನದ್ದೇ ಕಂಪೆನಿ ಎಂದು ಬಹಳಷ್ಟು ಯುವಜನರಿಗೆ ತಿಳಿದೇ ಇಲ್ಲ! ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65